**All India Radio: Bangalore**
**National Bulletin In Kannada**
**30.08.2025 1.10p.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**30.08.2025 1.10 p.m.**

**<><><><>**

ಮುಖ್ಯಾಂಶಗಳು

೧. ಉತ್ಪಾದನೆ, ತಂತ್ರಜ್ಞಾನ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಪಾಲುದಾರಿಕೆ ಸಾಧಿಸಲು ಭಾರತ-ಜಪಾನ್ ಗವರ್ನರ್‌ಗಳಿಗೆ ಪ್ರಧಾನಿ ನರೇಂದ್ರ ಮೋದಿ ಕರೆ

೨. ಚೀನಾದ ಟಿಯಾಂಜಿನ್‌ನಲ್ಲಿ ನಾಳೆ ಶಾಂಘೈ ಸಹಕಾರ ಸಂಘಟನೆ - ಎಸ್‌ಸಿಒ ೨೫ನೇ ರಾಷ್ಟ್ರಗಳ ಮುಖ್ಯಸ್ಥರ ಮಂಡಳಿ ಸಭೆ ಆರಂಭ

೩. ಸಮಸ್ತ ಭಾರತೀಯರನ್ನುದ್ದೇಶಿಸಿ ನಾಳೆ ಪ್ರಧಾನಿ ನರೇಂದ್ರ ಮೋದಿ ಮನದ ಮಾತು

೪. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಪ್ರತಿ ಸುಂಕ ವಿಧಿಸಲು ವಿಶೇಷ ಅಧಿಕಾರ ಇಲ್ಲ - ಅಮೆರಿಕ ಫೆಡರಲ್ ನ್ಯಾಯಾಲಯ

೫. ಏಷ್ಯಾ ಕಪ್ ಹಾಕಿ; ದಿನದ ಎರಡು ಪಂದ್ಯಗಳಲ್ಲಿಂದು ಬಾಂಗ್ಲಾದೇಶ - ಚೀನಾ, ಕೊರಿಯಾ-ಮಲೇಷ್ಯಾ ತಂಡಗಳು ಮುಖಾಮುಖಿ

><><><><><><><><><

೧೫ನೇ ಭಾರತ - ಜಪಾನ್ ವಾರ್ಷಿಕ ಶೃಂಗಸಭೆಯಲ್ಲಿ ಆರಂಭಗೊಂಡ ಪಾಲುದಾರಿಕೆ ಉಪಕ್ರಮ ಉಭಯ ರಾಷ್ಟ್ರಗಳ ನಡುವೆ ವ್ಯಾಪಾರ, ತಂತ್ರಜ್ಞಾನ, ಪ್ರವಾಸೋದ್ಯಮ, ಕೌಶಲ್ಯ, ಭದ್ರತೆ ಮತ್ತು ಸಾಂಸ್ಕೃತಿಕ ವಿನಿಮಯಕ್ಕೆ ಪುಷ್ಟಿ ನೀಡಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದಾರೆ. ಟೋಕಿಯೋದಲ್ಲಿಂದು ೧೬ ಪ್ರಾಂತ್ಯಗಳ ಗವರ್ನರ್‌ಗಳನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ, ಭಾರತ-ಜಪಾನ್‌ನ ಇತ್ತೀಚಿನ ಸಂಬಂಧಗಳು ಉಭಯ ರಾಷ್ಟ್ರಗಳ ಪ್ರಾಚೀನ ಸಾಂಸ್ಕೃತಿಕ ಸಂಬಂಧಗಳಿಂದ ಪ್ರೇರಿತವಾಗಿವೆ. ದೆಹಲಿ ಮತ್ತು ಟೋಕಿಯೋಗೆ ಸೀಮಿತವಾಗಿಸದೇ, ರಾಜ್ಯ - ಪ್ರಾಂತೀಯ ತೊಡಗಿಸಿಕೊಳ್ಳುವಿಕೆಗೆ ಉತ್ತೇಜನ ನೀಡಲು ಸಮಯ

ಬಂದೊದಗಿದೆ ಎಂದು ಹೇಳಿದರು. ಇದೇ ವೇಳೆ ಅವರು, ಹೊಸ ಉಪಕ್ರಮದ ಕುರಿತು ಕಾರ್ಯೋನ್ಮುಖರಾಗಿ ಉತ್ಪಾದನೆ, ತಂತ್ರಜ್ಞಾನ, ನಾವಿನ್ಯತೆ, ಸಂಚಾರ, ಮುಂದಿನ ಪೀಳಿಗೆಯ ಮೂಲಸೌಕರ್ಯ, ನವೋದ್ಯಮ ಮತ್ತು ಸಣ್ಣ ಹಾಗೂ ಮಧ್ಯಮ ಕೈಗಾರಿಕಾ ಕ್ಷೇತ್ರದಲ್ಲಿ ಪಾಲುದಾರಿಕೆಯನ್ನು ಸಾಧಿಸಲು ಜಪಾನ್‌ನ ಗವರ್ನರ್‌ಗಳು ಮತ್ತು ಭಾರತದ ರಾಜ್ಯಗಳ ರಾಜ್ಯಪಾಲರಿಗೂ ಕರೆ ನೀಡಿದರು. ಕಾರ್ಯಕ್ರಮದ ಬಳಿಕ ಪ್ರಧಾನಿ ನರೇಂದ್ರ ಮೋದಿ ಹಾಗು ಜಪಾನ್ ಪ್ರಧಾನಿ ಇಶಿಬಾ, ಪ್ರಮುಖ ಸೆಮಿಕಂಡಕ್ಟರ್ ಕಾರ್ಖಾನೆಯಾದ ಟೋಕಿಯೋ ಎಲೆಕ್ಟ್ರಾನ್ ಕಾರ್ಖಾನೆಗೆ ಭೇಟಿ ನೀಡಿದರು.

><><><><><><><><><><><

ಚೀನಾದ ಟಿಯಾಂಜಿನ್‌ನಲ್ಲಿ ನಾಳೆ ಶಾಂಘೈ ಸಹಕಾರ ಸಂಘಟನೆ - ಎಸ್‌ಸಿಒ ೨೫ನೇ ರಾಷ್ಟ್ರಗಳ ಮುಖ್ಯಸ್ಥರ ಮಂಡಳಿ ಸಭೆ ಆರಂಭವಾಗಲಿದೆ. ಪ್ರಧಾನಿ ನರೇಂದ್ರ ಮೋದಿ ಎರಡು ದಿನಗಳ ಶೃಂಗಸಭೆಯಲ್ಲಿ ಭಾಗವಹಿಸಲಿದ್ದು, ಉನ್ನತ ಮಟ್ಟದ ಜಾಗತಿಕ ನಾಯಕರೊಂದಿಗೆ ಚರ್ಚಿಸಲಿದ್ದಾರೆ. ೨೦೨೫ ರ ಶೃಂಗಸಭೆಯು ಜಾಗತಿಕ ಆಡಳಿತದಲ್ಲಿ ಹೊಸ ಮಾನದಂಡಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುವ ನಿರೀಕ್ಷೆಯಿದೆ ಮತ್ತು ಪ್ರಾದೇಶಿಕ ಭದ್ರತೆ, ಸಂಪರ್ಕ, ಸುಸ್ಥಿರ ಅಭಿವೃದ್ಧಿ ಮತ್ತು ಸದಸ್ಯ ರಾಷ್ಟ್ರಗಳಲ್ಲಿ ಒಗ್ಗಟ್ಟನ್ನು ಹೆಚ್ಚಿಸುವಂತಹ ನಿರ್ಣಾಯಕ ವಿಷಯಗಳ ಮೇಲೆ ಕೇಂದ್ರಿತವಾಗಿದೆ. ಚೀನಾ ಐದನೇ ಬಾರಿಗೆ ಎಸ್‌ಸಿಒ ಶೃಂಗಸಭೆಯನ್ನು ಆಯೋಜಿಸುತ್ತಿದ್ದು, ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅಧ್ಯಕ್ಷತೆ ವಹಿಸಲಿದ್ದಾರೆ, ೨೦ ಕ್ಕೂ ಹೆಚ್ಚು ವಿಶ್ವ ನಾಯಕರು ಮತ್ತು ೧೦ ಅಂತರರಾಷ್ಟ್ರೀಯ ಸಂಸ್ಥೆಗಳ ಮುಖ್ಯಸ್ಥರು ಭಾಗವಹಿಸುವ ನಿರೀಕ್ಷೆಯಿದೆ. ಪ್ರಧಾನಿ ನರೇಂದ್ರ ಮೋದಿ ಮತ್ತು ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಭಾಗವಹಿಸುವವರಲ್ಲಿ ಪ್ರಮುಖರಾಗಿದ್ದಾರೆ. ಇದು ಇದುವರೆಗಿನ ಅತಿದೊಡ್ಡ ಮತ್ತು ಅತ್ಯಂತ ಮಹತ್ವಾಕಾಂಕ್ಷೆಯ ಎಸ್‌ಸಿಒ ಸಭೆಯಾಗಿದೆ. ಚೀನಾ ೨೦೨೫ ಅನ್ನು " ಎಸ್‌ಸಿಒ ಸುಸ್ಥಿರ ಅಭಿವೃದ್ಧಿಯ ವರ್ಷ" ಎಂದು ಘೋಷಿಸಿದೆ. ಈ ಬಾರಿಯ ಶೃಂಗಸಭೆಯು ಹಿಂದಿನ ೨೫ ವರ್ಷಗಳ ಸಾಧನೆಗಳನ್ನು ಪರಿಶೀಲಿಸಲಿದ್ದು, ಹತ್ತು ವರ್ಷಗಳ ಅಭಿವೃದ್ಧಿ ಕಾರ್ಯತಂತ್ರದ ಅಳವಡಿಕೆ ಹಾಗೂ ಪ್ರಾದೇಶಿಕ ಭದ್ರತೆ, ಆರ್ಥಿಕ ಬೆಳವಣಿಗೆ, ಸಂಪರ್ಕ, ಭಯೋತ್ಪಾದನಾ ವಿರೋಧಿ ನೀತಿ ಮತ್ತು ಸಾಂಸ್ಕೃತಿಕ ಸಹಕಾರ ಕುರಿತಂತೆ ಚರ್ಚಿಸುವ ನಿರೀಕ್ಷೆ ಇದೆ.

><><><><><><><><><><

ಆಕಾಶವಾಣಿಯ ಜನಪ್ರಿಯ ಮಾಸಿಕ ಕಾರ್ಯಕ್ರಮ 'ಮನ್ ಕಿ ಬಾತ್' ನಲ್ಲಿ ನಾಳೆ ಬೆಳಗ್ಗೆ ೧೧ ಗಂಟೆಗೆ ಪ್ರಧಾನಿ ನರೇಂದ್ರ ಮೋದಿ, ದೇಶ-ವಿದೇಶಗಳಲ್ಲಿರುವ ಭಾರತೀಯ ಸಮುದಾಯದೊಂದಿಗೆ ತಮ್ಮ ಮನದಾಳದ ಮಾತುಗಳನ್ನು ಹಂಚಿಕೊಳ್ಳಲಿದ್ದಾರೆ. ಇದು 'ಮನ್ ಕಿ ಬಾತ್' ಕಾರ್ಯಕ್ರಮದ ೧೨೫ನೇ ಆವೃತ್ತಿಯಾಗಿದೆ. ಈ ಕಾರ್ಯಕ್ರಮ ಆಕಾಶವಾಣಿ ಮತ್ತು ದೂರದರ್ಶನದ ಎಲ್ಲ ವಾಹಿನಿಗಳು, ಎಐಆರ್ ನ್ಯೂಸ್ ಜಾಲತಾಣ, ನ್ಯೂಸ್ ಆನ್ ಏರ್ ಮೊಬೈಲ್ ಆಪ್‌ನಲ್ಲಿ ಪ್ರಸಾರವಾಗಲಿದೆ.  ಹಿಂದಿ ಅವತರಣಿಕೆಯ ನಂತರ ಪ್ರಾದೇಶಿಕ ಭಾಷೆಗಳಲ್ಲಿ ಈ ಕಾರ್ಯಕ್ರಮವನ್ನು ಕೇಳಬಹುದಾಗಿದೆ.

><><><><><><><><><><

೨೦೨೫-೨೬ರ ಹಣಕಾಸು ವರ್ಷದ ಏಪ್ರಿಲ್‌ನಿಂದ ಜೂನ್ ತ್ರೈಮಾಸಿಕದಲ್ಲಿ ಭಾರತದ ನೈಜ ಜಿಡಿಪಿ ಶೇಕಡ ೭.೮ರಷ್ಟು ಬೆಳವಣಿಗೆ ಹೊಂದುವ ನಿರೀಕ್ಷೆಯಿದೆ. ಕಳೆದ ಹಣಕಾಸು ವರ್ಷದ ೪ನೇ ತ್ರೈಮಾಸಿಕದಲ್ಲಿ ಜಿಡಿಪಿ ಶೇಕಡ ೭.೪ ರಷ್ಟಿತ್ತು. ಆದರೆ ಹಿಂದಿನ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ಅದು ಶೇಕಡ ೬.೫ ರಷ್ಟಿತ್ತು. ಅಂಕಿ-ಅಂಶಗಳು ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯ ನಿನ್ನೆ ಬಿಡುಗಡೆ ಮಾಡಿದ ಅಂದಾಜಿನ ಪ್ರಕಾರ, ಇದೇ ಅವಧಿಯಲ್ಲಿ ನಾಮಾಂಕಿತ ಜಿಡಿಪಿ ಶೇಕಡ ೮.೮ರಷ್ಟು ಬೆಳವಣಿಗೆ ದರ ಕಂಡಿದೆ. ಕಳೆದ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ದಾಖಲಾದ ಶೇಕಡ ೧.೫ರ ಬೆಳವಣಿಗೆ ದರಕ್ಕೆ ಹೋಲಿಸಿದರೆ, ಕೃಷಿ ಮತ್ತು ಸಂಬಂಧಿತ ವಲಯಗಳು ಶೇಕಡ ೩.೭ರ ನೈಜ ಒಟ್ಟು ಮೌಲ್ಯವರ್ಧಿತ ಬೆಳವಣಿಗೆ ದರ ಕಂಡಿದೆ. ಜಿಡಿಪಿ ಬೆಳವಣಿಗೆ ಬಗ್ಗೆ ಪ್ರತಿಕ್ರಿಯಿಸಿರುವ ಕೇಂದ್ರ ಸಚಿವ ಹರ್‌ದೀಪ್ ಸಿಂಗ್ ಪುರಿ, ೨೦೧೪ರಲ್ಲಿ ಎರಡು ಟ್ರಿಲಿಯನ್ ಡಾಲರ್ ಆರ್ಥಿಕತೆಯಾಗಿದ್ದ ಭಾರತ, ಜಾಗತಿಕವಾಗಿ ೧೧ನೇ ಸ್ಥಾನದಲ್ಲಿತ್ತು. ವಿವಿಧ ಉಪಕ್ರಮಗಳ ಬೆನ್ನಲ್ಲೇ ಭಾರತ ೫ನೇ ಸ್ಥಾನಕ್ಕೇರಿ ಪ್ರಸ್ತುತ ನಾಲ್ಕನೇ ಅತಿದೊಡ್ಡ ಆರ್ಥಿಕತೆಯಾಗಿದೆ ಹಾಗೂ ಶೀಘ್ರದಲ್ಲೇ ಮೂರನೇ ಅತಿದೊಡ್ಡ ಆರ್ಥಿಕತೆ ಹೊಂದಿದ ರಾಷ್ಟ್ರವಾಗುವತ್ತ ಮುನ್ನಡೆದಿದೆ ಎಂದಿದ್ದಾರೆ.

*****ಧ್ವನಿ****ಹರ್‌ದೀಪ್ ಸಿಂಗ್ ಪುರಿ

ಜಿಡಿಪಿ ಬೆಳವಣಿಗೆ ಕುರಿತು ಪ್ರತಿಕ್ರಿಯಿಸಿರುವ ಕೇಂದ್ರ ವಾಣಿಜ್ಯ ಸಚಿವ ಪಿಯೂಷ್ ಗೋಯಲ್, ಮುಂಬರುವ ದಿನಗಳಲ್ಲಿ ಅಭಿವೃದ್ಧಿಶೀಲ ರಾಷ್ಟ್ರವಾಗಿರುವ ಭಾರತದ ಆರ್ಥಿಕ ಬೆಳವಣಿಗೆ ಅದಕ್ಕೆ ಹಲವು ಅವಕಾಶಗಳನ್ನು ಒದಗಿಸಲಿದೆ. ವಿವಿಧ ರಾಷ್ಟ್ರಗಳು ಇಂದು ಭಾರತದೊಂದಿಗೆ ವ್ಯಾಪಾರ ನಡೆಸಲು ಉತ್ಸುಕವಾಗಿವೆ.

****ಧ್ವನಿ*** ಪಿಯೂಷ್ ಗೋಯಲ್

><><><><><><><><><><

ಅಮೆರಿಕದ ಫೆಡರಲ್ ಅಪೀಲ್ ನ್ಯಾಯಾಲಯ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿಧಿಸಿದ್ದ ಹಲವು ಪ್ರತಿ ಸುಂಕಗಳನ್ನು ತಿರಸ್ಕರಿಸಿದೆ. ಟ್ರಂಪ್ ಅವರು ಸುಂಕ ವಿಧಿಸಲು ಅಂತಾರಾಷ್ಟ್ರೀಯ ತುರ್ತು ಆರ್ಥಿಕ ಅಧಿಕಾರ ಕಾಯ್ದೆಯನ್ನು ಕಾನೂನುಬಾಹಿರವಾಗಿ ಬಳಸಿದ್ದಾರೆ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ. ಈ ಕಾಯ್ದೆಯಡಿಯಲ್ಲಿ ಇಂತಹ ಸುಂಕಗಳನ್ನು ವಿಧಿಸಲು ಅಧಿಕಾರವಿಲ್ಲ ಎಂದು ನ್ಯಾಯಾಲಯ ಸ್ಪಷ್ಟಪಡಿಸಿದೆ. ಆದರೆ ನ್ಯಾಯಾಲಯ ಸುಂಕಗಳನ್ನು ತಕ್ಷಣವೇ ತೆಗೆದುಹಾಕದೆ, ಅಕ್ಟೋಬರ್ ೧೪ರ ವರೆಗೆ ಟ್ರಂಪ್ ಆಡಳಿತಕ್ಕೆ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲು ಅವಕಾಶ ನೀಡಿದೆ. ತೀರ್ಪು ಬೆನ್ನಲ್ಲೇ ಅಧ್ಯಕ್ಷ ಟ್ರಂಪ್ ಅದನ್ನು ಅತಿಯಾಗಿ ಪಕ್ಷಪಾತಿ ಎಂದು ಖಂಡಿಸಿದ್ದು, ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸುವುದಾಗಿ ಘೋಷಿಸಿದ್ದಾರೆ. ಶ್ವೇತಭವನದ ಉಪ ಮಾಧ್ಯಮ ಕಾರ್ಯದರ್ಶಿ ಖುಷ್ ದೇಸಾಯಿ, ಸುಂಕಗಳು ಇನ್ನೂ ಜಾರಿಯಲ್ಲಿವೆ ಎಂದು ಸ್ಪಷ್ಟಪಡಿಸಿದ್ದಾರೆ. ಈ ತೀರ್ಪು ಕೇವಲ ಪ್ರತಿ ಸುಂಕಗಳಿಗೆ ಅನ್ವಯಿಸಿದ್ದು, ಇತರ ನಿಯಮಾವಳಿಅಡಿ ವಿಧಿಸಲಾದ ಸುಂಕಗಳಿಗೆ ಅನ್ವಯಿಸುವುದಿಲ್ಲ. ಸುಪ್ರೀಂಕೋರ್ಟ್‌ನಲ್ಲೂ ಈ ತೀರ್ಪಿಗೆ ಜಯ ಸಿಕ್ಕಲ್ಲಿ ಭಾರತಕ್ಕೆ ವಿಧಿಸಲಾಗಿರುವ ಶೇಕಡ ೨೫ರಷ್ಟು ಹೆಚ್ಚುವರಿ ಪ್ರತಿ ಸುಂಕ ಸ್ಥಗಿತಗೊಳ್ಳಲಿದೆ.

><><><><><><><><><><

ಬಿಹಾರದ ರಾಜ್‌ಗಿರ್‌ನಲ್ಲಿ ನಡೆಯುತ್ತಿರುವ, ಏಷ್ಯಾ ಕಪ್ ಹಾಕಿ ಚಾಂಪಿಯನ್‌ಶಿಪ್‌ನ ಎರಡನೇ ದಿನವಾದ ಇಂದು ಎರಡು ಪಂದ್ಯಗಳು ನಡೆಯಲಿವೆ. ಬಾಂಗ್ಲಾದೇಶ ಮತ್ತು ಚೀನಾ

ತೈಪೆ ನಡುವೆ ಮೊದಲ ಪಂದ್ಯ ನಡೆಯಲಿದ್ದು, ಎರಡನೇ ಪಂದ್ಯದಲ್ಲಿ ಏಷ್ಯಾದ ಎರಡು ಬಲಿಷ್ಠ ಹಾಕಿ ತಂಡಗಳಾದ ಕೊರಿಯಾ ಮತ್ತು ಮಲೇಷ್ಯಾ ನಡುವೆ ನಡೆಯಲಿದೆ.

><><><><><><><><><><